**ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**

ದಿಃ 10-12 -2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂಎನ್ ಎಂ ವಕೀಲರವರಿಂದಃ -**

ಆರೋಪಿಗೆ ಯಾವುದೇ ತಂಗಿ ಇಲ್ಲ ಮತ್ತು ಅವರ ಕುಟುಂಬದ ಬಗ್ಗೆ ಯಾವುದೇ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಲ ನೀಡಲು ಆರೋಪಿಗೆ ಏನು ತೊಂದರೆ ಇತ್ತು ನಾನು ತಿಳಿದುಕೊಂಡಿಲ್ಲ. ಸಾಕ್ಷಿ ಮುಂದುವರೆದು ನನ್ನ ಮಗನ ಮೂಲಕ ನೀಡಿದ್ದೆನೆ ಎನ್ನುತ್ತಾರೆ. ಆರೋಪಿಯು ಯಾರಿಂದ ಕೈಸಾಲ ಮಾಡಿದ್ದಾರೆಂದು ತಿಳಿದುಕೊಂಡಿದ್ದೇನೆ. ಸದರಿಯವರು ಯಾರಿಂದಲೂ ಕೈಸಾಲ ಮಾಡಿಲ್ಲದಿದ್ದರೂ ಕೂಡ ನಾನು ಸುಳ್ಳು ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ಆರೋಪಿಯವರು ಕೋಳಿ ವ್ಯಾಪಾರ ಮಾಡುತ್ತಿದ್ದರಿಂದ ವ್ಯವಸಾಯ ಮಾಡಲು ಸಾಲ ಪಡೆಯುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಸಾಲ ಪಡೆದ ನಂತರ ಈಗ ಕೋಳಿ ವ್ಯಾಪಾರ ಮಾಡುತ್ತಿದ್ದಾರೆ ಎನ್ನುತ್ತಾರೆ. ದಿ 24-05-2021 ರಂದು ಸಾಲ ಪಡೆದು ಅದೇ ದಿನ ಚೆಕ್ ನೀಡಿದ್ದಲ್ಲಿ ದಿ 07-04-2022 ರವರೆಗೆ ಚೆಕ್ ಹಾಜರುಪಡಿಸದೇ ಇರಲು ತೊಂದರೆ ಇತ್ತೆ ಎಂದರೆ ಸಾಕ್ಷಿ ಕೊಡಬಹುದು ಎಂದು ಕಾಯುತ್ತಿದ್ದೇವು ಎನ್ನುತ್ತಾರೆ. ಸದರಿಯವರು ಊರಿನಲ್ಲಿ ಇಲ್ಲದ ಸಮಯ ನೋಡಿಕೊಂಡು ಚೆಕ್ ನ್ನು ಹಾಜರುಪಡಿಸಿ ನೋಟೀಸ್ ಕೊಟ್ಟಿದ್ದೆನೆಂದರೆ ಸರಿಯಲ್ಲ. ಆರೋಪಿಯು ಊರಿನಲ್ಲಿ ಇಲ್ಲದ ಕಾರಣದಿಂದಲೇ ಡೋರ್ ಲಾಕ್ ಎಂದು ಹಿಂಬರಹ ಬಂದಿದೆ ಎಂದರೆ ಸರಿಯಲ್ಲ. ಆರೋಪಿಯು ನನ್ನಿಂದ ಯಾವುದೇ ಸಾಲ ಪಡೆಯದೇ ಇದ್ದರೂ ಚೀಟಿಯ ಭದ್ರತೆಗಾಗಿ ನೀಡಿದ್ದ ಚೆಕ್ ನ್ನು ದುರುಪಯೋಗಪಡಿಸಿಕೊಂಡು ಪ್ರಕರಣಕ್ಕಾಗಿ ದಾಖಲಾತಿಗಳನ್ನು ಸೃಷ್ಟಿಸಿಕೊಂಡು, ಸುಳ್ಳು ಪ್ರಕರಣ ಸಲ್ಲಿಸಿ, ಸುಳ್ಳು ನುಡಿಯುತ್ತಿದ್ದೆನೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮದ್ದೂರು